ನೇತೃತ್ವವನ್ನು ವಹಿಸಿಕೊಂಡು ಯಶಸ್ಸನ್ನೂ ಕಂಡ. ಒಬ್ಬ ಮಗ ದೊಡ್ಡ ಫಿಶ್ ಎಕ್ಸ್‌ಪೋರ್ಟರ್, ನೂರಾರು ಕೋಟಿ ಟರ್ನ್ ಓವರ್. ಇನ್ನೊಬ್ಬ ಮಗ ಅಮೇರಿಕದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್. ವೆಳ್ಳಿಯಪ್ಪನ್ ಮಾತ್ರ ಇಲ್ಲಿ, ಬರಿ ಮೈಯಲ್ಲಿ ಓಡಾಡಿಕೊಂಡು ನೆಮ್ಮದಿಯಾಗಿದ್ದಾನೆ. ಹತ್ತಾರು ವರ್ಷಗಳ ಕಾಲ ಸಮುದ್ರದಲ್ಲಿ ಆಯಾಸವಿಲ್ಲದೆ ತಿರುಗಾಡಿರುವುದರಿಂದ ವೆಳ್ಳಿಯಪ್ಪನಿಗೆ ಜಲರಾಗದ ಬಗ್ಗೆ ಅಪಾರ ಜ್ಞಾನವಿದೆ...' ಎಂದು ವೆಳ್ಳಿಯಪ್ಪನನ್ನು ಪರಿಚಯಿಸಿದ್ದರು.

ಬಹುಶಃ ಸಮಯ ಸರಿಯಲೆಂದೇ ಕೆ.ಎಮ್. ನಯ್ಯಾರ್ ಮಾತನಾಡಿದಂತಿತ್ತು. ನಯ್ಯಾರರ ಬಾಯಿಯನ್ನೇ ಗಮನಿಸುತ್ತಿದ್ದ ವೆಳ್ಳಿಯಪ್ಪನ್ 'ನನ್ನ ಏಳಿಗೆಯ ಸುತ್ತಲೂ ಈ ನಯ್ಯಾರರ ನೆರಳಿದೆ ಸಾರ್. ಫಿಶ್ಶಿಂಗ್ ಎಕ್ಸ್‌ಪೋರ್ಟ್ ಬಿಸಿನೆಸ್ ವ್ಯವಹಾರದ ಶೇಕಡಾ ಎಂಬತ್ತರಷ್ಟು ಭಾಗ ದುಡ್ಡು ಇವರದೇ. ಇನ್ನು ಪಂಚಭೂತಗಳ ಅಸ್ತಿತ್ವವಿಲ್ಲದೆ ಯಾವ ಸೃಷ್ಟಿಯೂ ನೆಲೆಗೊಳ್ಳಲಾರದು. ಭೂಮಿ, ಆಕಾಶ, ಗಾಳಿ, ಬೆಂಕಿ, ನೀರು ಈ ಪಂಚಭೂತಗಳು ಒಂದನ್ನು ಬಿಟ್ಟು ಒಂದಿರಲಾರವು. ಈ ಎಲ್ಲವೂ ಒಟ್ಟಿಗೆ ದಕ್ಕಿರುವುದು ಭೂಮಿಯೆಂಬ ನಮ್ಮ ಪುಣ್ಯಗ್ರಹಕ್ಕೆ ಮಾತ್ರ. ಇವು ಜೀವಜಗತ್ತಿನ್ನು ಸೃಷ್ಟಿಸುವಂತೆ ವಿನಾಶವನ್ನೂ ಮಾಡಬಲ್ಲವು. ನೀರು, ಗಾಳಿ, ಬೆಂಕಿ ಇವುಗಳ ಅಸ್ತಿತ್ವಕ್ಕೆ ಆಕ್ಸಿಜನ್ ಅನಿವಾರ್ಯ. ಆಕ್ಸಿಜನ್ ಇರುವುದು ನಮ್ಮ ಗ್ರಹವೊಂದರಲ್ಲಿ ಮಾತ್ರವೆಂದು ಇದುವರೆಗಿನ ವಿಜ್ಞಾನ ಸಂಶೋಧನೆಗಳು ಹೇಳುತ್ತವೆ. ಆದ್ದರಿಂದ ಆಕ್ಸಿಜನ್ ಎಂಬ ಕಣ್ಣಿಗೆ ಕಾಣದ ಅನಿಲವೇ ದೇವರು. ಈ ಆಕ್ಸಿಜನ್‌ನಿಂದಾಗಿ ಗಾಳಿ, ನೀರು, ಬೆಂಕಿ ಉತ್ಪಾದನೆಯಾಗುತ್ತಿವೆಯಲ್ಲ, ಎಂಥ ಅದ್ಭುತ.

'ವೆಳ್ಳಿಯಪ್ಪನ ಯಾವ ಮಾತುಗಳಲ್ಲೂ ಅತಿಶಯೋಕ್ತಿ ಅಡಗಿದೆಯೆಂದು ನನಗನ್ನಿಸಲಿಲ್ಲ. ಅಷ್ಟೊತ್ತಿಗೆ ಆರು ಗಂಟೆಯಾಗಿತ್ತು. ಮಳೆ ಕಡಿಮೆಯಾಗಿರುವುದರ ಜೊತೆಗೆ ನೀರು ಹರಿಯುವ ರಭಸದ ಸದ್ದು ಕೂಡ ಕಡಿಮೆಯಾಗಿತ್ತು. ಕೆಲವರು ಅಲ್ಲಿಯೇ ಮಲಗಿ ನಿದ್ದೆ ಹೋಗಿದ್ದರು. ಕೆಲವರು ಕುಳಿತಲ್ಲೇ ತೂಕಡಿಸುತ್ತಿದ್ದರು. ಮಲಮೂತ್ರ ವಿಸರ್ಜಿಸಲು ನಾನು ರೂಮಿನ ಕಡೆ ನಡೆಯುತ್ತಿದ್ದಾಗ ನನ್ನೊಂದಿಗೆ ರೂಮಿನ ಬಾಗಿಲವರೆಗೂ ಬಂದ ಭಗವಾನ್ ಕುಟ್ಟಿ, 'ವೆಳ್ಳಿಯಪ್ಪನ ಇಬ್ಬರು ಹೆಂಡತಿಯರು ಇಂದು ಅಮೇರಿಕಾದಲ್ಲಿದ್ದಾರೆ. ಅವರಿಬ್ಬರೂ ಸ್ವಂತ ಅಕ್ಕತಂಗಿಯರು. ಭರ್ಜರಿ ಪರ್ಸನಾಲಿಟಿ ಇಬ್ಬರದೂ. ಅವರ ಹದಿಹರೆಯದಲ್ಲಿ, ಮದುವೆಗೆ ಮುಂಚೆ ಇಲ್ಲೇ ಮನೆ ಮತ್ತು ರಬ್ಬರ್ ತೋಟಗಳಲ್ಲಿ ಕೆಲಸ ಮಾಡಿಕೊಂಡಿದ್ದವರು, ಕೆ.ಎಮ್. ನಯ್ಯಾರ್‌ಗೆ ತುಂಬಾ ಪ್ರೀತಿ ಪಾತ್ರರಾಗಿದ್ದರು. ಅಕ್ಕನನ್ನು ಮೊದಲು ಮದುವೆಯಾದ ವೆಳ್ಳಿಯಪ್ಪನ್ ಎಂಟು ತಿಂಗಳಿಗೇ ಗಂಡು ಮಗುವಿಗೆ ಜನ್ಮವಿತ್ತಿದ್ದ ಹೆಂಡತಿಯ ಬಾಣಂತನಕ್ಕೆಂದು ತಂಗಿಯನ್ನು ಕರೆದುಕೊಂಡು ಹೋಗಿದ್ದ! ಅಕ್ಕನ ಬಾಣಂತನಕ್ಕೆಂದು ಹೋದ ತಂಗಿಯೂ ಏಳು ತಿಂಗಳಲ್ಲೇ ಗಂಡು ಮಗುವಿಗೆ ಜನ್ಮವಿತ್ತಿದ್ದಳು! ಮಕ್ಕಳು ಥೇಟ್ ನಮ್ಮ ಕೆ.ಎಮ್. ನಯ್ಯಾರರನ್ನೇ ಹೋಲುತ್ತಿದ್ದವು. ನಯ್ಯಾರ್ ತಿಂಗಳಲ್ಲಿ ಎರಡು ಸಾರಿಯಾದರೂ ಚೆಟ್ಟುವಾದಲ್ಲಿ ಹಾಲ್ಟ್ ಆಗಿ ಮೀನು ಹುಳಿಯನ್ನು ಸವಿದು ಬರುತ್ತಿದ್ದರು. ಅಂಥ ಸಂದರ್ಭದಲ್ಲಿ ವೆಳ್ಳಿಯಪ್ಪನ್ ಎರಡು ದಿನವಾದರೂ ಸಮುದ್ರದಲ್ಲಿ ಫಿಶ್ಶಿಂಗ್ ಮಾಡುತ್ತಾ ಇದ್ದುಬಿಡುತ್ತಿದ್ದ. ವೆಳ್ಳಿಯಪ್ಪನಿಗೆ ಎಲ್ಲವೂ ಅರಿವಿತ್ತು. ಹಾಗಾಗಿಯೇ ಇವೊತ್ತು ವೆಳ್ಳಿಯಪ್ಪನ್ ಅಧ್ಯಾತ್ಮದಲ್ಲಿ ಮುಳುಗಿಹೋಗಿದ್ದಾನೆ...' ಭಗವಾನ್ ಕುಟ್ಟಿಯ ಮಾತುಗಳ ಹಿಂದಿನ ಪೂರ್ತಿ ಅರ್ಥವನ್ನು ಮನತುಂಬಿಕೊಂಡು ರೆಸ್ಟ್ ರೂಮಿಗೆ ಹೋಗಿ ಬಂದಿದ್ದೆ. ರೆಸ್ಟ್ ರೂಮಿನಿಂದ ಹೊರಕ್ಕೆ ಬಂದಾಗಲೂ ಭಗವಾನ್ ಕುಟ್ಟಿ ನಗುತ್ತಾ ಅಲ್ಲಿಯೇ ನಿಂತಿದ್ದ.

'ಎಂಥ ಕಠಿಣ ಮತ್ತು ಕಷ್ಟದ ಸಂದರ್ಭದಲ್ಲೂ ನಮ್ಮ ಮಾಧವನ್ ಪಿಳ್ಳೈ, ಕೆ.ಎಮ್. ನಯ್ಯಾರ್, ವೆಳ್ಳಿಯಪ್ಪನ್, ಅರುಂಧತಿ ಪಿಳ್ಳೈ, ಸಿಂಧು ಮೆನನ್ ಮತ್ತು ನಾನು ನಗುನಗುತ್ತಲೇ ಏಕೆ ಇರುತ್ತೇವೆಂದರೆ ನಾವೆಲ್ಲರೂ ಎಲ್‌ಎಸ್ಡಿ ಫ್ಯಾಮಿಲಿಗೆ ಸೇರಿರುವುದಲ್ಲದೆ ತಿಂಗಳಿಗೆರಡು ಸಾರಿಯಾದರೂ ಎಲ್‌ಎಸ್ಡಿ ಟ್ರಿಪ್‌ನಲ್ಲಿ ಇರುತ್ತೇವೆ...' ಎಂದು ಭಗವಾನ್ ಕುಟ್ಟಿ ನಗುತ್ತಾ ಹೇಳಿದ್ದ.

'ಏನದು ಎಲ್‌ಎಸ್ಡಿ ಟ್ರಿಪ್, ಎರಡನೇ ಸಾರಿ ಆ ಪದವನ್ನು ಕೇಳುತ್ತಿದ್ದೇನೆ...' ಕುತೂಹಲ ತಡೆಯಲಾರದೆ ಕೇಳಿಬಿಟ್ಟಿದ್ದೆ. 'ಈಗ ಸಮಯವಲ್ಲ, ನಡೆಯಿರಿ' ಎಂದು ಕೆ.ಎಮ್. ನಯ್ಯಾರ್ ಕುಳಿತಿರುವ ಕಡೆ ನಡೆದ. ನಾನೂ ಹಿಂಬಾಲಿಸಿ ಹೋಗಿ ಮಾಮೂಲಿಯಾಗಿ ಚೇರ್ ಮೇಲೆ ಕುಳಿತಿದ್ದೆ.

ಮತ್ತೊಂದು ಗ್ಲಾಸ್ ಚಹಾವನ್ನು ಹೀರಿದ ನಯ್ಯಾರ್ ಗ್ಲಾಸನ್ನು ಭಗವಾನ್ ಕುಟ್ಟಿಯ ಕೈಗೆ ಕೊಡುತ್ತಾ 'ಭಗವಾನ್ ಮಾಧವನ್ ಪಿಳ್ಳೈಗೆ ಫೋನ್ ಮಾಡು..' ಎಂದು ಹೇಳುತ್ತಿರುವಾಗಲೇ ಭಗವಾನ್ ಕುಟ್ಟಿ ಮತ್ತು ಕೆ.ಎಮ್. ನಯ್ಯಾರ್ ಇಬ್ಬರ ಫೋನುಗಳೂ ಮೊಳಗಿದ್ದವು. ನಯ್ಯಾರ್ ಹಲೋ ಎಂದು ಫೋನ್ ಕಿವಿಗಿಟ್ಟುಕೊಂಡು ಆ ಕಡೆಯ ಮಾತುಗಳನ್ನು ಗಂಭೀರವಾಗಿ ಆಲಿಸುತ್ತಿದ್ದರು. ಭಗವಾನ್ ಕುಟ್ಟಿ 'ಅಯ್ಯೋ... ಹೌದಾ... ದೇವರೇ...' ಮುಂತಾದ ಉದ್ಗಾರಗಳನ್ನು ಹೊರಡಿಸುತ್ತಿದ್ದ. ನಯ್ಯಾರ್ ಮುಖ ಭಯದಿಂದ ಬಿಳಿಚಿಕೊಳ್ಳತೊಡಗಿತು. ಭಗವಾನ್ ಕುಟ್ಟಿ ಮಾತನಾಡುತ್ತಿದ್ದ ಪರಿಗೆ ಅಲ್ಲಿ ಕುಳಿತಿದ್ದ ಕೆಲವರು, 'ಏನಂತೆ? ಏನಾಯ್ತಂತೆ?' ಮುಂತಾಗಿ ಭಯಮಿಶ್ರಿತ ಕುತೂಹಲದಲ್ಲಿ ವಿಚಾರಿಸಿಕೊಂಡಿದ್ದರು. ಅಷ್ಟರಲ್ಲಿ ನನ್ನ ಫೋನ್ ಕೂಡಾ ಮೊಳಗಿತ್ತು. ಅಲ್ಲಿಂದ ಎದ್ದು 'ಹಲೋ' ಎನ್ನುತ್ತಾ ಪಕ್ಕಕ್ಕೆ ನಡೆದೆ. 'ಹಲೋ ಎಲ್ಲಿದ್ದೀಯ?' ಗಾಬರಿಯಿಂದ ಮಾತನಾಡುತ್ತಿದ್ದ ರಾಘವರೆಡ್ಡಿ.

'ಎರ್ನಾಕುಲಂನಲ್ಲಿದ್ದೀನಿ. ಕೆ.ಎಮ್. ನಯ್ಯಾರ್ ಮನೆಯಲ್ಲಿ, ವಿಪರೀತ ಮಳೆಯಿಲ್ಲಿ...' ನನ್ನ ಮಾತುಗಳನ್ನು ಮಧ್ಯದಲ್ಲಿ ತುಂಡರಿಸುತ್ತಾ, 'ನಾನು ಏರ್‌ಪೋರ್ಟ್‌ಗೆ ಹೊರಡಲು ಸಿದ್ಧನಾಗುತ್ತಿದ್ದೆ. ಎರಡು ನಿಮಿಷಗಳ ಹಿಂದೆ ಫ್ಲೈಟ್ ಕ್ಯಾನ್ಸಲ್ ಆಗಿರುವುದಾಗಿ ಮೆಸೇಜ್ ಬಂತು. ತುಂಬಾ ಮಳೆಯಂತೆ, ಕೊಚ್ಚಿನ್ ಏರ್‌ಪೋರ್ಟ್ ನೀರಿನಿಂದ ಪೂರ್ತಿ ಮುಳುಗಡೆಯಾಗಿದೆಯಂತೆ. ಇನ್ನೂ ಮೂರು ದಿನ ವಿಮಾನ ಹಾರಾಟ ಅನುಮಾನವಂತೆ. ಎರ್ನಾಕುಲಂ, ತ್ರಿಶ್ಯೂರ್ ಜಿಲ್ಲೆಗಳಲ್ಲಿ ಸಿಕ್ಕಾಪಟ್ಟೆ ಪ್ರವಾಹವಂತೆ. ಅಂದಾಜಿಗೆ ಸಿಗದಷ್ಟು ನಷ್ಟವಾಗಿರಬಹುದೆಂದು ಸುದ್ದಿ. ಸದ್ಯ ನೀನು ಸೇಫಾಗಿದ್ದೀಯ. ಒಂದತ್ತು ನಿಮಿಷದಲ್ಲಿ ಮತ್ತೆ ಫೋನ್ ಮಾಡ್ತೀನಿ...' ಎಂದು ಫೋನ್ ಕಟ್ ಮಾಡಿದ್ದ ರಾಘವರೆಡ್ಡಿ. ನಾನು ಮಾತನಾಡಿ ಹಿಂತಿರುಗಿದಾಗ ಭಗವಾನ್ ಕುಟ್ಟಿ ಬಿಕ್ಕಳಿಸುತ್ತಿದ್ದ. ಕೆ.ಎಮ್. ನಯ್ಯಾರರ ಕಣ್ಣುಗಳು ಹನಿಗೂಡಿದ್ದವು.

'ಗುಡ್ಡ ಕುಸಿದು ಮಾಧವನ್ ಪಿಳ್ಳೈ ಮನೆ ಸೇರಿದಂತೆ ಅಲ್ಲಿನ ಏಳೆಂಟು ಮನೆಗಳು ಕೊಚ್ಚಿಹೋಗಿವೆಯಂತೆ. ಒಂದಿಷ್ಟು ಅವಶೇಷವೂ ಇಲ್ಲವಂತೆ. ಪಕ್ಕದ ತೋಟದ ಥಾಮಸ್ ಫೋನ್ ಮಾಡಿದ್ದರು. ಏನೂ ತೋಚುತ್ತಿಲ್ಲ. ಮಾಧವನ್ ಪಿಳ್ಳೈ, ಅರುಂಧತಿ ಪಿಳ್ಳೈ ಯಾರೂ ಉಳಿದಿಲ್ಲ. ಎಲ್ಲರ ಫೋನುಗಳೂ ನಾಟ್ ರೀಚಬಲ್. ಪ್ರವಾಹ ಚಂಗನ್ನೇರಿ ರೈಲು ನಿಲ್ದಾಣದವರೆಗೂ ಹಬ್ಬಿದೆಯಂತೆ. ಓ ದೇವರೇ ..' ಭಗವಾನ್ ಕುಟ್ಟಿಯ ಮಾತುಗಳಲ್ಲಿ ದುಃಖದ ಕಟ್ಟೆಯೊಡೆದಿತ್ತು.

'ನಿನ್ನ ಮಾತುಗಳು ಸುಳ್ಳಾಗಲಿ ಭಗವಾನ್ ಕುಟ್ಟಿ. ಇಷ್ಟಕ್ಕೂ ದೇವರ ತೀರ್ಮಾನ ಮತ್ತು ಹಣೆಬರಹದ ಮುಂದೆ ಮನುಷ್ಯನದೇನಿದೆ. ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜಿಂಗ್‌ಗೆ ಏನೂ ಅನಾಹುತವಾಗಿಲ್ಲವಂತೆ. ಮಾಧವನ್ ಪಿಳ್ಳೈ, ಅರುಂಧತಿ ಪಿಳ್ಳೈ ಇಲ್ಲವೆಂಬುದನ್ನು ಊಹಿಸಿಕೊಳ್ಳುವುದಾದರೂ ಹೇಗೆ?' ಬಿಕ್ಕಳಿಸತೊಡಗಿದರು ಕೆ.ಎಮ್. ನಯ್ಯಾರ್. ರಾತ್ರಿ ಇಲ್ಲಿಗೆ ಬರದೆ ನಾನು ಅಲ್ಲಿಯೇ ಉಳಿದುಕೊಂಡಿದ್ದರೆ! ನನ್ನ ಜೊತೆ ಬರದೆ ಭಗವಾನ್ ಕುಟ್ಟಿ ಅಲ್ಲೇ ಉಳಿದುಕೊಂಡಿದ್ದರೆ! ವಿಧಿಗೆ ಅರ್ಥವನ್ನಾದರೂ ಹೇಗೆ ಹುಡುಕುವುದು? ನನ್ನ ಮನಸ್ಸು ಮತ್ತು ದೇಹದಲ್ಲಿನ ನರನಾಡಿಗಳಲ್ಲಿ ಅರುಂಧತಿ ಪಿಳ್ಳೈಳ ರಕ್ತ ವೇಗವಾಗಿ ಹರಿದಾಡುತ್ತಿರುವಂತೆ ಅನುಭವವಾಗತೊಡಗಿತ್ತು. ಭಗವಾನ್ ಕುಟ್ಟಿ ನನ್ನ ಪಕ್ಕ ನಿಂತು ನನ್ನ ತೋಳು ಹಿಡಿದುಕೊಂಡ.

'ನೀವು ಬರದೇ ಇದ್ದಿದ್ದರೆ ನಾನು ನಿನ್ನೆ ರಾತ್ರಿ ಅಲ್ಲಿಯೇ ಉಳಿಯುತ್ತಿದ್ದೆ. ನಿಮ್ಮಿಂದಾಗಿ ನಾನಿಂದು ಜೀವಂತವಾಗಿ ಇದ್ದೇನೆ. ನಿಜಕ್ಕೂ ನನಗೆ ನೀವೇ ದೇವರು. ಜಗತ್ತಿನಲ್ಲಿ ಸಂಭವಿಸುವ ಪ್ರತಿಕ್ಷಣದ ಸಂಗತಿಗಳು ನಿಜಕ್ಕೂ ಎಲ್ಲಾ ಪ್ರಜ್ಞೆ, ಜ್ಞಾನ, ವಿಜ್ಞಾನಗಳಿಗೆ ಮೀರಿದ್ದು... ನನಗೆ ಏನು ಮಾತನಾಡಲೂ ತೋಚುತ್ತಿಲ್ಲ...' ಎಂದು ಅತ್ಯಂತ ದುಃಖದಲ್ಲೂ ವಿನಯವಾಗಿ ಹೇಳಿದ್ದ.

ಕೆ.ಎಮ್. ನಯ್ಯಾರ್ ಎದ್ದು ನಿಂತು, 'ಅವು ಒಳ್ಳೆಯವೇ ಆಗಿರಲಿ, ಕೆಟ್ಟವೇ ಆಗಿರಲಿ ವರ್ತಮಾನದ ಸಂಗತಿಗಳನ್ನು ಒಪ್ಪಿಕೊಳ್ಳದೆ ವಿಧಿಯಿಲ್ಲ. ಭೂಮಿ ಸೃಷ್ಟಿಯಾದಾಗಿನಿಂದಲೂ ಅದೆಷ್ಟು ಜೀವಿಗಳು ಹುಟ್ಟಿವೆಯೋ ಅಷ್ಟೂ ನಾಶವಾಗಿರುವುದಂತೂ ಸತ್ಯದ ವಿಷಯವೇ ಆಗಿದೆ. ಭೂಮಿಗೆ ಎಲ್ಲವನ್ನೂ ಜೀರ್ಣಿಸಿಕೊಳ್ಳುವ ಶಕ್ತಿ ಇದೆ. ತಾನು ಸೃಷ್ಟಿಸುವ ಪ್ರತಿಯೊಂದು ಜೀವಿಯನ್ನೂ ತನ್ನಲ್ಲಿ ಅಡಗಿಸಿಕೊಂಡು ತನ್ನದೇ ರೂಪ ಕೊಡುವ